<u>ಕರ್ನಾಟಕ ಲೋಕಾಯುಕ್ತ</u>

ಸಂಖ್ಯೆ.ಕಂಪ್ಲೆಂಟ್/ಲೋಕ್/ಬಿಸಿಡಿ/2519/2018/ಡಿಆರ್ಇ-03

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿ:17.12.2019.

**<u>ನೋಟೀಸ್</u>**

ವಿಷಯ:- ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ **ಹುಳಿಮಾವು ಕೆರೆಯ** ಒತ್ತುವರಿ ಹಾಗೂ ಅಭಿವೃದ್ಧಿಗೆ ಸಂಬಂಧಪಟ್ಟಂತೆ ದಿನಾಂಕ:10.12.2019ರಂದು ಹೊರಡಿಸಿರುವ ಆದೇಶವನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ಕ್ರಮ ವಹಿಸತಕ್ಕದ್ದು ಹಾಗೂ ತಾವು ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು **ದಿನಾಂಕ:10.01.2020ರೊಳಗಾಗಿ** ಈ ಕಚೇರಿಗೆ ಸಲ್ಲಿಸತಕ್ಕದ್ದು.

ಮುಂದುವರೆದು, ಸದರಿ ಪ್ರಕರಣವು **ದಿನಾಂಕ:10-01-2020 ರಂದು 3-00 ಗಂಟೆಗೆ** ಗೌ.ಲೋಕಾಯುಕ್ತರವರ ಮುಂದೆ ನಿಗಧಿಪಡಿಸಿದೆ.

ಗೌ.ಲೋಕಾಯುಕ್ತರವರ ಕಾರ್ಯದರ್ಶಿಗಳು ಹಾಗೂ
ಉಪನಿಬಂಧಕರು ವಿಚಾರಣೆಗಳು-03,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಇವರಿಗೆ,

1. The C.E.O., Namma Bangalore Foundation, 2nd Floor, No.54, Rockline Centre, Richmond Road, Bangalore.
2. Sri.K.Siddegowda, Chief Engineer, Bommanahalli Zone, BBMP, Bengaluru. Mobile No:9480685348.
3. Sri.M.Ramakrishna, Joint Commissioner, Bommanahalli Zone, BBMP, Bengaluru. Mobile No:9480683433.
4. Sri.Sheshadri Y.N., Executive Engineer, Bommanahalli Zone, BBMP, Bengaluru. Mobile No:9480685777.

P.T.O.

5. Sri.Linge Gowda, Assistant Executive Engineer, BBMP, Lakes, Bengaluru. Mobile No:9480683005.
6. Sri.K.R.Doreswamy, Assistant Executive Engineer, BBMP, Bengaluru. Mobile No:9845869637.
7. Sri. R.V.Bhat, Law Officer, Karnataka Pollution Control Board, Church Street, Bengaluru. Mobile No:9449229797.
8. Sri. Shanmukappa, Zonal Senior Environmental Officer, Karnataka Pollution Control Board, Church Street, Bengaluru South. Mobile No:9845311465.
9. Sri. A.Rajashekara, Executive Engineer, BWSSB, Bangalore, 9845694593.

## KARNATAKA LOKAYUKTA : BENGALURU

No: Compt/Lok/BCD-2519/2018 Date: 10-12-2019

## ORDER

The Complainant Sri. H.S.Doreswamy is present along with Sri.Lakshmikanth and others.

2. On behalf of Bruhat Bengaluru Mahanagara Palike (herein after referred to as **'BBMP'** for short), Sri. K.Siddegowda, Chief Engineer, Bommanahalli Zone, is present along with Sri. M.Ramakrishna, Joint Commissioner, Bommanahalli Zone, Sri. Sheshadri Y.N, Executive Engineer, Bommanahalli Zone, Sri. K.R.Doreswamy, AEE and Sri. Lingegowda, Assistant Executive Engineer, who is now put in charge of the Lakes.

3. On behalf of Karnataka State Pollution Control Board, Bengaluru (herein after referred to as **'KSPCB'** for short), Sri. R.V.Bhat, Law Officer is present along with Sri.Shanmukhappa, Zonal Senior Environmental Officer, Bengaluru South.

4. On behalf of Bengaluru Water Supply and Sewerage Board (herein after referred to **'BWSSB'** for short), Sri. A. Rajashekara, Executive Engineer, is present.

5. Smt. N. Asha Kumari, Assistant Director of Land Records, Bengaluru, is present along with Sri. Girish, Surveyor.

6. Pursuant to my order dated 25-11-2019, on behalf of BBMP, a status report dated 02-12-2019 has been filed. Along with status report, certain annexures including the photographs have been filed in support of the statement made in the status report that the BBMP has taken effective steps to redress the grievance of the public, etc. Today, additional status report dated 09-12-2019 has been filed with regard to the steps taken by the BBMP up-to-date. Copies of both the status reports have been served on the Complainant. **The Complainant is reserved liberty to file rejoinder, if any, if he so desires, by the next date of hearing.** It is useful to extract the report dated 09-12-2019, which reads as follows:

# "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೊಮ್ಮನಹಳ್ಳಿ ವಲಯ

**ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ವಾರ್ಡ ನಂ 193– ಅರಕೆರೆ ವ್ಯಾಪ್ತಿಯ ಹುಳಿಮಾವು ಗ್ರಾಮದ ಹುಳಿಮಾವು ಕೆರೆಯ ಕಟ್ಟೆ ಹೊಡೆದಿರುವ ಬಗ್ಗೆ ಸಂಕ್ಷಿಪ್ತ ವರದಿ**

1. ಹುಳಿಮಾವು ಕೆರೆಯ ವಿಸ್ತೀರ್ಣ ಸುಮಾರು 124.13 ಎಕೆರೆ/ಗುಂಟೆ ಪ್ರದೇಶವಾಗಿದ್ದು, ದಿನಾಂಕ:– 24–11–2019 ರಂದು ಅಪರಾಹ್ನ 12.30 ಕ್ಕೆ ಕೆರೆ ಕಟ್ಟೆ ಹೊಡೆದಿರುತ್ತದೆ. ಇದರಿಂದ ಕೆರೆಯ ಕೆಳ ಭಾಗದಲ್ಲಿನ ಸುತ್ತ ಮುತ್ತಲಿನ ಪ್ರದೇಶದ ಬಡಾವಣೆಗಳು ಜಲಾವೃತಗೊಂಡಿರುತ್ತದೆ. ತಕ್ಷಣವೇ ಬಿ.ಬಿ.ಎಂ.ಪಿ ಬೊಮ್ಮನಹಳ್ಳಿ ವಲಯ ಸಿಬ್ಬಂದಿಗಳು ಸ್ಥಳಕ್ಕೆ ದಾವಿಸಿರುತ್ತಾರೆ. ಅದೇ ದಿನ ಬಿ.ಬಿ.ಎಂ.ಪಿ. ವತಿಯಿಂದ ಘಟನೆ ಬಗ್ಗೆ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಸಂಬಂಧಪಟ್ಟವರ ವಿರುದ್ದ ದಾವೆಯನ್ನು ಹೂಡಲಾಗಿರುತ್ತದೆ.

2. ದಿನಾಂಕ:–24–11–2019 ರಂದು ಕೆರೆಯ ಕಟ್ಟೆ ಹೊಡೆದ ವಿಷಯ ತಿಳಿಯುತ್ತಿದ್ದಂತೆ ಪೂಜ್ಯ ಮಹಾಪೌರರು, ಉಪ ಮಹಾಪೌರರು, ಮಾನ್ಯ ಆಯುಕ್ತರು, ಮಾನ್ಯ ವಲಯ ಆಯುಕ್ತರರು, ಅಧಿಕಾರಿ ಸಿಬ್ಬಂದಿಗಳು ಹಾಗೂ ಸ್ಥಳೀಯ ಪಾಲಿಕೆ ಸದಸ್ಯರೊಂದಿಗೆ ಘಟನಾ ಸ್ಥಳಕ್ಕೆ ಬೇಟಿ ನೀಡಿ, ಮಾನ್ಯ ಆಯುಕ್ತರು ಸ್ಥಳದಲ್ಲಿ ತುರ್ತು ಕ್ರಮ ಕೈಗೊಳ್ಳಲು ಆದೇಶ ನೀಡಿರುತ್ತಾರೆ.
   ಅ) ಹೊಡೆದಿರುವ ಕೆರೆ ಕಟ್ಟೆಯ ಹೊಡೆದ ಸ್ಥಳದ ಮೇಲ್ಭಾಗದ ಸ್ಥಳದಲ್ಲಿ ನೀರಿಗೆ ಅಡ್ಡಲಾಗಿ ನಮ್ಮ ಮೆಟ್ರೋ ಕಾಮಗಾರಿಯ ಕಟ್ಟಡಗಳ ಅವಶೇಷಗಳನ್ನು ಹಾಕಿ ಮಣ್ಣಿನಿಂದ (Earthen Bund) ಕಟ್ಟೆಯನ್ನು ನಿರ್ಮಿಸಿ ಹರಿಯುತ್ತಿದ್ದ ನೀರನ್ನು ತಡೆದು ಸಾರ್ವಜನಿಕರ ಪ್ರಾಣ, ಆಸ್ತಿ ಪಾಸ್ತಿಗೆ ಹಾನಿ ತಡೆಗಟ್ಟಲು ಆದೇಶಿಸಿರುತ್ತಾರೆ.
   ಆ) ತುರ್ತು ಪರಿಸ್ಥಿತಿಯಲ್ಲಿ ಕೂಡಲೇ ಅಗತ್ಯ ಯಂತ್ರೋಪಕರಣಗಳಾದ ಇಟಾಚಿ, ಜೆ.ಸಿ.ಬಿ, ಟಿಪ್ಪರ್‌ಗಳು, ಟ್ರ್ಯಾಕ್ಟರ್‌ಗಳನ್ನು ಬಿ.ಬಿ.ಎಂ.ಪಿ, ಬಿ.ಎಂ.ಆರ್.ಸಿ.ಎಲ್ (ನಮ್ಮ ಮೆಟ್ರೋ) ಇಲಾಖೆಯಿಂದ, ಇತರೆ ಗುತ್ತಿಗೆದಾರರಿಂದ, ಹಾಗೂ ಕಟ್ಟಡ ನಿರ್ಮಾಣದಾರರಿಂದ ಪಡೆದುಕೊಳ್ಳತಕ್ಕದ್ದು ಹಾಗೂ ಸ್ಥಳದಲ್ಲೇ ಮಾನ್ಯ ಆಯುಕ್ತರರು ವ್ಯವಸ್ಥಾಪಕ ನಿರ್ದೇಕರು, ನಮ್ಮ ಮೆಟ್ರೋ ರವರಿಗೆ ದೂರವಾಣಿ ಮುಖಾಂತರ ಯಂತ್ರೋಪಕರಣಗಳನ್ನು ಸ್ಥಳಕ್ಕೆ ಕಳುಹಿಸಿಕೊಡಲು ನಿರ್ದೇಶನ ನೀಡಿದರು.

3. ಅದರಂತೆ, ಹಿಟಾಚಿ –5 ಸಂಖ್ಯೆ, ಜೆ.ಸಿ.ಬಿ–8 ಸಂಖ್ಯೆ, ಟಿಪ್ಪರ್–36 ಸಂಖ್ಯೆ, ಟ್ರ್ಯಾಕ್ಟರ್ –9 ಸಂಖ್ಯೆಗಳನ್ನು ಪಾಲಿಕೆ, ಬಿ.ಎಂ.ಆರ್.ಸಿ.ಎಲ್, ಸ್ಥಳೀಯ ಕಟ್ಟಡ ನಿರ್ಮಾಣದಾರರು ಹಾಗೂ ಇತರೆ ಏಜೆನ್ಸಿಗಳ ಮುಖಾಂತರ ನಿಯೋಜಿಸಿಕೊಳ್ಳಲಾಗಿರುತ್ತದೆ. ಸುಮಾರು 200ಕ್ಕೂ ಹೆಚ್ಚು ಟಿಪ್ಪರ್‌ಗಳ (10 ಚಕ್ರಗಳ)

ಕಟ್ಟಡಗಳ ಅವಶೇಷಗಳು ಮತ್ತು ಮಣ್ಣಿನಿಂದ ಸದರಿ ಹೊಡೆದಿದ್ದ ಕೆರೆಯ ಭಾಗದಲ್ಲಿ ಅಡ್ಡಲಾಗಿ ಕಟ್ಟೆಯನ್ನು ನಿರ್ಮಾಣ ಮಾಡಲಾಗಿರುತ್ತದೆ. ಹಾಗೂ ಸದರಿ ಕಟ್ಟೆಯ ಮಣ್ಣು ತುಂಬಿದ ಟಿಪ್ಪರ್‌ಗಳನ್ನು ಮತ್ತು ಹಿಟಾಚಿಗಳಿಂದ ಸಮತಟ್ಟು (Consolidation) ಮಾಡಲಾಗಿರುತ್ತದೆ. ಅದರಂತೆ ಅದೇ ದಿನ ರಾತ್ರಿ 8.00 ಘಂಟೆಯೊತ್ತಿಗೆ ಕೆರೆಯ ಕಟ್ಟೆಯನ್ನು ಮುಚ್ಚಿ ಹರಿಯುತ್ತಿರುವ ನೀರನ್ನು ತಡೆದು ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ಪಾಸ್ತಿಗೆ ಹಾನಿಯಾಗದಂತೆ ತಡೆಗಟ್ಟಲಾಗಿರುತ್ತದೆ.

4. ಅದೇ ದಿನ ಹುಳಿಮಾವು ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಾದ ಕೃಷ್ಣ ಬಡಾವಣೆ, ಹುಳಿಮಾವು ಬಿಡಿಎ ಬಡಾವಣೆ, ಶಾಂತಿನಿಕೇತನ ಬಡಾವಣೆ, ವಿಶ್ವೇಶ್ವರಯ್ಯ ಡಬಲ್ ರಸ್ತೆ, ಸರಸ್ವತಿ ಪುರಂ, ಅವನಿಶೃಂಗೇರಿ ನಗರ, ಆರ್,ಆರ್ ಬಡವಣೆ, ಬಿ,ಟಿ,ಎಂ ಬಡಾವಣೆ 4 ನೇ ಅಂತ, ಅನುಗ್ರಹ ಬಡವಣೆ, ಸತ್ಯಸಾಯಿ ಬಡಾವಣೆ ಕೋಡಿಚಿಕ್ಕನಹಳ್ಳಿ, ರಾಘವೇಂದ್ರ ಮಠ ವಿಶ್ವೇಶ್ವರಯ್ಯ ಬಡಾವಣೆಗಲ್ಲಿ ಸುಮಾರು 610 ಮನೆಗಳಿಗೆ ನೀರು ನುಗ್ಗಿದ್ದು, ಪೋಲೀಸ ಇಲಾಖೆಯ (ಕಾನೂನು ಮತ್ತು ಸುವ್ಯವಸ್ಥೆ, ಸಂಚಾರ) ಅಗ್ನಿ ಶಾಮಕದಳ, ಎನ್.ಡಿ.ಆರ್.ಎಫ್, ಎಸ್.ಡಿ.ಆರ್.ಎಫ್, ಸಿವಿಲ್ ಡಿಫೇನ್ಸ್ ಮತ್ತು ಬಿಬಿಎಂಪಿ ಸಿಬ್ಬಂದಿಯೊಂದಿಗೆ ಬೋಟ್‌ಗಳ ಮುಖಾಂತರ ನಾಗರೀಕರನ್ನು ಮತ್ತು ಮಕ್ಕಳನ್ನು ರಕ್ಷಣೆ ಮಾಡಲಾಯಿತು.

-: 2 :-

5. ಹುಳಿಮಾವು ಗ್ರಾಮದ ಸಾಯಿಬಾಬ ದೇವಸ್ಥಾನದ ಬಳಿ ಇರುವ ಟೆನ್ನಿಸ್ ಕೋರ್ಟ್‌ನಲ್ಲಿ ತಾತ್ಕಾಲಿನ ಗಂಜಿ ಕೇಂದ್ರವನ್ನು ತೆರದು ಸುಮಾರು 192 ನಿರಾಶ್ರಿತರಿಗೆ ಮೂಲ ಸೌಕರ್ಯಗಳಾದ ಹಾಸಿಗೆ, ಒದಿಗೆ, ಕುಡಿಯುವ ನೀರು, ಈ-- ಶೌಚಾಲಯಗಳನ್ನು ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಯಿತು.

6. ನಿರಾಶ್ರಿತರಿಗೆ ಬಿ.ಬಿ.ಎಂ.ಪಿ. ಆರೋಗ್ಯ ಇಲಾಖೆ ಮತ್ತು ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿಗಳ ತಂಡದಿಂದ ಆರೋಗ್ಯ ತಪಾಸಣೆಯನ್ನು ನಡೆಸಿ ಸೂಕ್ತ ಚಿಕಿತ್ಸೆಯನ್ನು ನೀಡಲಾಯಿತು.

7. ಘನತ್ಯಾಜ್ಯ ನಿರ್ವಹಣೆ ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಪ್ರತ್ಯೇಕ ತಂಡವಾಗಿ ಪ್ರವಾಹ ಆಗಿರುವ ಮನೆಗಳನ್ನು ಶುಚಿಗೊಳಿಸಲಾಗಿರುತ್ತದೆ. ಕಂದಾಯ ಮತ್ತು ಇಂಜಿನಿಯರಿಂಗ ಇಲಾಖಾ ಸಿಬ್ಬಂದಿಗಳು ಜಲಾವೃತವಾಗಿರುವ ಮನೆಗಳ ಸರ್ವೆ ಮಾಡಿ

ಅ) ನಷ್ಟ ಸಂಭವಿಸಿರುವ 374 ಕುಟುಂಬಗಳಿಗೆ ತಲಾ ರೂ.50,000/- ಗಳಂತೆ ಒಟ್ಟು ರೂ.1,87,00,000 ಪರಿಹಾರವನ್ನು ನೀಡಲು ಕ್ರಮವಹಿಸಲಾಗಿರುತ್ತದೆ.

ಆ) ಹಾನಿಗೊಂಡಿರುವ 5 ಮನೆಗಳಿಗೆ (ಪ್ರಕೃತಿ ವಿಕೋಪ ಇಲಾಖೆಯ ಮಾರ್ಗಸೂಚಿಯಂತೆ, ರೂ.95100/- ಪ್ರತಿ ಮನೆಗೆ) ಒಟ್ಟಾರೆ ರೂ.475500/- ರೂಗಳ ಪರಿಹಾರವನ್ನು ನೀಡಲು ಕ್ರಮವಹಿಸಲಾಗಿರುತ್ತದೆ.

8. 165 ಕುಟುಂಬದ ನಿರಾಸ್ರಿತರಿಗೆ ತಲಾ ರೂ.2500/– ಗಳ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಒದಗಿಸಲಾಗಿರುತ್ತದೆ.

9. ಆರೋಗ್ಯ ಇಲಾಖೆಯವರು ಪ್ರವಾಹ ಬಂದಿರುವ ಸ್ಥಳಗಳಲ್ಲಿ ಸಂಕ್ರಾಮಿಕ ರೋಗಗಳು ಹರಡದಂತೆ ಸೊಳ್ಳೆ ನಿಯಂತ್ರಣ, ಧೂಮೀಕರಣಗಳನ್ನು, ಸ್ವಚ್ಚತೆ, ಅಗತ್ಯ ಸ್ಥಳಗಳಲ್ಲಿ ಬ್ಲೀಚಿಂಗ ಪೌಡರ್ ಅಳವಡಿಸಿ ನೈರ್ಮಲ್ಯತೆಯನ್ನು ಕಾಪಾಡಲು ಹಾಗೂ ಘನತ್ಯಾಜ್ಯ ನಿರ್ವಹಣೆ ಸಿಬ್ಬಂದಿಗಳು ಸ್ವಚ್ಚತಾ ಕಾರ್ಯಗಳನ್ನು ಕೈಗೊಳ್ಳಲಾಗಿರುತ್ತದೆ.

10. ಗಂಜಿಕೇಂದ್ರದ ಬಳಿ ನಿರಾಶ್ರಿತರ ಆರೋಗ್ಯದ ದೃಷ್ಟಿಯಿಂದ ಅಂಬುಲೆನ್ಸ್ ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿರುತ್ತದೆ.

11. ಬೊಮ್ಮನಹಳ್ಳಿ ವಲಯ ಎಲ್ಲಾ ಇಂಜಿನಿಯರಿಂಗ್, ಆರೋಗ್ಯ, ಕಂದಾಯ, ಘನತ್ಯಾಜ್ಯ ವಿಲೇವಾರಿ ಹಾಗೂ ಇತರ ಸಿಬ್ಬಂಧ್ಧಿಗಳನ್ನು 6 ಗುಂಪುಗಳಾಗಿ ತುರ್ತು ದುರಸ್ಥಿ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ನಿಯೋಜಿಸಲಗಿರುತ್ತದೆ. ಪಾಲಿಕೆ ವತಿಯಿಂದ ಟ್ರ್ಯಾಕ್ಟರ್ ಹಾಗೂ ಕಾರ್ಮಿಕರನ್ನು, ಪ್ರವಾಹ ಪರಿಹಾರ ನಿಯಂತ್ರಣ ಕೊಠಡಿ ಸಿಬ್ಬಂಧ್ಧಿಗಳು, 45ಹೆಚ್.ಪಿ ಹೆವಿ ಡ್ಯೂಟಿ 2 ಸಂಖ್ಯೆಯ ಪಂಪ್‌ಗಳನ್ನು, 10 ಹೆಚ್.ಪಿ 20 ಸಂಖ್ಯೆ ಪಂಪ್‌ಗಳನ್ನು ಬಳಸಿಕೊಂಡು ಸಂಪ್ ಟ್ಯಾಂಕ್ ಗಳಲ್ಲಿರುವ ಕಲುಷಿತ ನೀರನ್ನು ಹೊರಹಾಕಿ ಸ್ವಚ್ಚಗೊಳಿಸಲಾಗಿರುತ್ತದೆ. ಅಗ್ನಿಶಾಮಕದಳ ದವರು ಒದಗಿಸಿದ 5 ಸಂಖ್ಯೆ ಹೇವಿ ಡ್ಯೂಟಿ ಪಂಪ್‌ಗಳನ್ನು ಬಳಸಿ ಬೆಸ್ಮೆಂಟ್‌ಗಳಿಂದ ನೀರನ್ನು ಹೊರಹಾಕಲಾಗಿರುತ್ತದೆ.

12. ಮಾನ್ಯ ಕಂದಾಯ ಸಚಿವರಾದ ಶ್ರೀ ಅಶೋಕ್. ಮಾನ್ಯ ವಸತಿ ಸಚಿವ ಶ್ರೀ ಸೋಮಣ್ಣ ಹಾಗೂ ಮಾನ್ಯ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ರವರು ಘಟನೆ ನಡೆದ ಸ್ಥಳಕ್ಕೆ ಬೇಟಿ ನೀಡಿ ತಪಿತಸ್ಥರನ್ನು ಬಂದಿಸುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿ ತಕ್ಷಣ ರೂ 50,000 ಗಳಂತೆ ಪರಿಹಾರವನ್ನು 24 ಗಂಟೆಯೊಳಗೆ ನಿರಾಶ್ರಿತರ ಬ್ಯಾಂಕ್ ಖಾತೆ ಜಮಾ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

13. ಗೌರವಾನ್ವಿತ ಮಾನ್ಯ ಲೋಕಾಯುಕ್ತರಾದ ನ್ಯಾಯಮೂರ್ತಿ ಶ್ರೀ ವಿಶ್ವನಾಥ್ ಶೆಟ್ಟಿರವರು ಘಟನಾ ಸ್ಥಳಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು, ನಿರಾಶ್ರಿತರೊಂದಿಗೆ ಮತ್ತು ಪ್ರದೇಶದಲ್ಲಿನ ತೊಂದರೆಗೊಳಗಾದ ಕುಟುಂಬ ಸದಸ್ಯರೊಂದಿಗೆ ಸಮಾಲೋಚಿಸಿದರು ಹಾಗೂ ತುರ್ತು ಪರಿಹಾರ ನಿವಾಹಣೆ ಕೈಗೊಂಡ ಬಗ್ಗೆ ಪರಿಶೀಲನೆ ನಡೆಸಿ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ಬಿ.ಬಿ.ಎಂ.ಪಿ ಅಧಿಕಾರಿಗಳಿಗೆ ನಿರ್ದೇಶಿದರು.

14. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರು ಘಟನೆ ನಡೆದ ಸ್ಥಳಕ್ಕೆ ಬೇಟಿ ನೀಡಿದರು, ಸ್ಥಳ ಪರಿಶೀಲಿಸಿ ತುರ್ತು ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ಮಾಡಲು ಆದೇಶಿಸಿ ತಕ್ಷಣ ಸಂತ್ರಸ್ಥ ಪ್ರತಿ ಕುಟುಂಬಗಳಿಗೆ ರೂ.50,000

ಗಳಂತೆ ಪರಿಹಾರವನ್ನು 24 ಗಂಟೆಯೊಳಗೆ ಸಂತ್ರಸ್ಥರ ಬ್ಯಾಂಕ್ ಖಾತೆ ಜಮಾ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

15. ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ.ಸತೀಶ್ ರೆಡ್ಡಿ ರವರು ಘಟನೆ ನಡೆದ ಸ್ಥಳಕ್ಕೆ ಬೇಟಿ ನೀಡಿದರು, ಸ್ಥಳ ಪರಿಶೀಲಿಸಿ ತುರ್ತು ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ಮಾಡಲು ಆದೇಶಿಸಿ ತಕ್ಷಣ ಸಂತ್ರಸ್ಥ ಪ್ರತಿ ಕುಟುಂಬಗಳಿಗೆ
ಅ)ಮನೆಗಳಲ್ಲಿನ ವಸ್ತುಗಳು ಹಾನಿಗೊಳಗಾದ ಪ್ರತಿ ಕುಟುಂಬದವರಿಗೆ ಜೀವನ ನಡೆಸಲು ತಕ್ಷಣ ಪರಿಹಾರ ನೀಡುವುದು.
ಆ)ಮನೆ ಕಟ್ಟಡಗಳಿಂದ ಹಾನಿಗೊಳಗಾದ ಪ್ರತಿ ಕುಟುಂಬದವರಿಗೆ ತಕ್ಷಣ ಕಟ್ಟಡ ದುರಸ್ತಿ ಕ್ರಮ ಕೈಗೊಳ್ಳಲು ತಕ್ಷಣ ಪರಿಹಾರ ನೀಡುವುದು.
ಇ)ಹಾನಿಗೊಳಗಾದ ಪ್ರದೇಶಗಳಲ್ಲಿನ ಸ್ವಚ್ಚತೆ, ಕಲ್ವರ್ಟ ಮತ್ತು ಚರಂಡಿಗಳಲ್ಲಿ ಹೂಳು ತೆಗೆಯುವುದು, ಹಾಳಾಗಿರುವ ಕಲ್ವರ್ಟ ಮತ್ತು ಚರಂಡಿಗಳನ್ನು ತಕ್ಷಣ ದುರಸ್ಥಿಗೊಳಿಸುವುದು.
ಈ) ಹಾನಿಗೊಳಗಾದ ಪ್ರದೇಶಗಳಲ್ಲಿನ ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಕಾಮಗಾರಿಗಳನ್ನು ತಕ್ಷಣ ಕೈಗೆತ್ತಿಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

16. ಸದರಿ ಬಡಾವಣೆಗಳಲ್ಲಿ ಅದರಲ್ಲಿ ಮುಖ್ಯವಾಗಿ ಕೃಷ್ಣ ಬಡಾವಣೆಯಲ್ಲಿ ನಿರಾಶ್ರಿತರ ಬಳಿಯಿದ್ದ ಪ್ರಮುಖ ದಾಖಲಾತಿಗಳಾದ ಗುರುತಿನ ಚೀಟಿ, ಡ್ರೈವಿಂಗ್ ಲೈಸನ್ಸ್, ಬ್ಯಾಂಕ್ ಪಾಸ್ ಬುಕ್, ಆದಾರ ಕಾರ್ಡ, ರೇಷನ್ ಕಾರ್ಡ ಹಾಗೂ ಇತರೆ ದಾಖಲಾತಿಗಳನ್ನು 67 ಕುಟುಂಬಗಳು ಕಳೆದುಕೊಂಡಿರುವುದು ಕಂಡುಬಂದಿದ್ದು ನಿವಾಸಿಗಳ ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ದಾಖಲಾತಿಗಳನ್ನು ಸಂಬದಪಟ್ಟ ಇಲಾಖೆಗಳಿಂದ ಮರುವಿತರಿಸಲು ಕ್ರಮ ಕೈಗೊಳ್ಳಲಾಗುವುದು.

17. ಸದರಿ ಬಡಾವಣೆಗಳಲ್ಲಿ ನಿರಾಶ್ರಿತ ಶಾಲಾ ಮಕ್ಕಳನ್ನು ಗುರುತಿಸುವ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳಿಗೆ ತೆರಳಿ ಸಂಬಂದಪಟ್ಟ ಶಾಲಾ ಮುಖ್ಯಸ್ಥರೊಂದಿಗೆ ಚರ್ಚಿಸುವ ವೇಳೆಯಲ್ಲಿ 30 ಮಕ್ಕಳು ವಿವಿದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವುದು ಕಂಡುಬಂದಿದೆ. ಸದರಿ ವಿದ್ಯಾರ್ಥಿಗಳಿಗೆ ವಿದ್ಯಾಬ್ಯಾಸಕ್ಕೆ ಬಾದಕವಾಗದಂತೆ ಪಠ್ಯ ಪುಸ್ತಕಗಳು, ನೋಟ್ ಪುಸ್ತಕಗಳು ಮುಂತಾದವುಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

18. ಮಾನ್ಯ ಆಯುಕ್ತರ ಆದೇಶದ ಮೇರೆಗೆ 6 ಭಾಗಗಳಾಗಿ ವಿಂಗಡಿಸಿ ಪ್ರತಿ ಭಾಗಗಳಿಗೆ ಏಜೆನ್ಸಿಗಳನ್ನು ತುರ್ತು ಕಾರ್ಯಗಳಾದ ಸ್ವಚ್ಚತೆ , ಚರಂಡಿಗಳಲ್ಲಿ ಹೂಳೆತ್ತುವುದು. ದುಸ್ಥಿತಿಯಲ್ಲಿರುವ ಚರಂಡಿ ಹಾಗೂ ಕಲ್ವರ್ಟಗಳ ಪುನರ್ ನಿರ್ಮಾಣ, ಹಾನಿಯಾಗಿರುವ ರಸ್ತೆ ಹಾಗೂ ಪುಟ್ ಪಾತ್ ಗಳ ಪುನರ್ ನಿರ್ಮಾಣ ಮಾಡಲು ನೀಯೋಜಿಸಲಾಗಿದೆ

19. ಹಾನಿಗೊಳಗಾದ ಕೃಷ್ಣ ಬಡಾವಣೆ, ಹುಳಿಮಾವು ಬಿಡಿಎ ಬಡಾವಣೆ, ಶಾಂತಿನಿಕೇತನ ಬಡಾವಣೆ, ವಿಶ್ವೇಶ್ವರಯ್ಯ ಡಬಲ ರಸ್ತೆ, ಸರಸ್ವತಿ ಪುರಂ, ಅವಣಿಶೃಂಗೇರಿ ನಗರ, ಆರ.ಆರ.ಬಡಾವಣೆ, w193(ಅರಕೆರೆ)-ರಾಘವೇಂದ್ರ ಮಠ ವಿಶ್ವೇಶ್ವರಯ್ಯ ಬಡಾವಣೆ, w188(ಬಿಳೇಕಹಳ್ಳಿ)-ಅನುಗ್ರಹ ಬಡವಣೆ, ಸತ್ಯಸಾಯಿ ಬಡಾವಣೆ, w175(ಬೊಮ್ಮನಹಳ್ಳಿ)-ಬಿ,ಟಿ,ಎಂ ಬಡಾವಣೆ 4 ನೇ ಅಂತ, ಕೋಡಿಚಿಕ್ಕನಹಳ್ಳಿ ಪ್ರದೇಶಗಳನ್ನು 8 ಭಾಗಗಳಾಗಿ ವಿಂಗಡಿಸಿ ತುರ್ತು ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು 8 ಅಂದಾಜು ಪಟ್ಟಿಗಳ ಒಟ್ಟು ಮೊತ್ತ ರೂ.29.00 ಕೋಟಿಗಳಿಗೆ ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರವರಿಗೆ ಸಲ್ಲಿಸಲಾಗಿದೆ".

Sri. Lingegowda, Assistant Executive Engineer (Lakes), has submitted the status report dated 10-12-2019. It is useful to extract the said report, which reads as here under:

**"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಮುಖ್ಯ ಅಭಿಯಂತರರು, ಕೆರೆಗಳು ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2ನೇ ಮಹಡಿ, ಅನೆಕ್ಸ್ ಕಟ್ಟಡ-03, ಎನ್.ಆರ್ ಚೌಕ, ಬೆಂಗಳೂರು-02.

ಸಂ: ಮು.ಅ/(ಕೆರೆಗಳು)/ಪಿ.ಆರ್/36/2019-20 ದಿನಾಂಕ: 10.12.19

**ರವರಿಗೆ,**

ಕಾರ್ಯದರ್ಶಿಗಳು ಹಾಗೂ ಉಪ ನಿಬಂಧಕರು,
ವಿಚಾರಣೆಗಳು-3,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಮಾನ್ಯರೇ,

**ವಿಷಯ:** ಹೆಚ್. ಎಸ್. ದೊರೆಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

**ಉಲ್ಲೇಖ:** 1. ತಮ್ಮ ಪತ್ರ ಸಂಖ್ಯೆ: ಕಂಪ್ಲೆಂಟ್ /ಲೋಕ/ಬಿಸಿಡಿ/2519/2018/ಡಿಆರ್‌ಇ-03 ದಿನಾಂಕ: 25-11-2019.

2. ಸರ್ಕಾರದ ಆದೇಶ ಸಂಖ್ಯೆ: ನಅಇ 449 ಬೆಂಅಸೇ 2016, ದಿ: 14-09-2016.
3. ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ:ಆಯುಕ್ತರು/(ಕೆರೆಗಳು)/ಪಿ.ಆರ್/ 1458/2019-20 ದಿನಾಂಕ: 16/7/2019.
4. ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ:ಆಯುಕ್ತರು/(ಕೆರೆಗಳು)/ ಪಿ.ಆರ್/232/2019-20 ದಿನಾಂಕ: 25-10-2019.

5. ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ಬೆಂಗಳೂರು, ದಿನಾಂಕ: 01/02/2019.
6. ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ಬೆಂಗಳೂರು, ದಿನಾಂಕ: 20/09/2019.
7. ಹುಳಿಮಾವು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿರುವ ಪ್ರಥಮ ವರ್ತಮಾನ ವರದಿ (First Information Report) ಸಂಖ್ಯೆ: 0246/2019, ದಿನಾಂಕ: 24.11.2019.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ಸಲ್ಲಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತ ರವರು ಹುಳಿಮಾವು ಕೆರೆಯ ಕಟ್ಟೆ ಒಡೆದು ಉಂಟಾಗಿರುವ ಹಾನಿಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದ ಮೇರೆಗೆ, ವಿವರಗಳು ಈ ಕೆಳಕಂಡಂತೆ ಸಲ್ಲಿಸಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಹುಳಿಮಾವು ಗ್ರಾಮದ ಸರ್ವೆ ನಂ. 42 ಮತ್ತು ಕಮ್ಮನಹಳ್ಳಿ ಗ್ರಾಮದ ಸರ್ವೆ ನಂ. 110 ರಲ್ಲಿರುವ 140 ಎಕರೆ 17 ಗುಂಟೆ ವಿಸ್ತೀರ್ಣದ ಹುಳಿಮಾವು ಕೆರೆಯೂ ಸೇರಿದಂತೆ ಒಟ್ಟು 58 ಕೆರೆಗಳನ್ನು ಉಲ್ಲೇಖ (2) ರ ಸರ್ಕಾರದ ಆದೇಶದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ದಿ: 14-09-2016 ರಂದು ಆದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶದಂತೆ, ಈ ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆಗಳ ಒಟ್ಟು ವಿಸ್ತೀರ್ಣ, ಒತ್ತುವರಿ ವಿವರ, ಒತ್ತುವರಿ ತೆರವುಗೊಳಿಸಿರುವ ವಿವರ, ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿವರ, ಸರ್ಕಾರದಿಂದ ಭೂಮಂಜೂರಾತಿ ಆದ ಪ್ರಕರಣಗಳಿದ್ದರೆ ಅಂತಹ ಸರ್ಕಾರಿ ಆದೇಶಗಳ ವಿವರ, ಹಾಗೂ ಭೂ-ಮಂಜೂರಾತಿಗಳ ವಿವರಗಳೊಂದಿಗೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆಗಳನ್ನು ಅಭಿವೃದ್ಧಿಪಡಿಸಿದ್ದಲ್ಲಿ ಅಭಿವೃದ್ಧಿ ಕಾಮಗಾರಿಗಳ ವಿವರ, ಅಭಿವೃದ್ಧಿಗಾಗಿ ವ್ಯಯಿಸಿರುವ ವೆಚ್ಚದ ವಿವರಗಳೊಂದಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಜಂಟಿ ತಪಾಸಣೆ ಕೈಗೊಂಡು ಕೆರೆಗಳನ್ನು ಪಾಲಿಕೆಗೆ ಹಸ್ತಾಂತರಿಸುವ ಕ್ರಮ ಕೈಗೊಳ್ಳಲು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರನ್ನು ದಿನಾಂಕ: 16-07-2019 (ಉಲ್ಲೇಖ ಪತ್ರ 3) ಹಾಗೂ ಮತ್ತೊಮ್ಮೆ ನೆನಪೋಲೆಯನ್ನು ದಿನಾಂಕ: 25.10.2019 ರಂದು (ಉಲ್ಲೇಖ ಪತ್ರ 4) ರಂತೆ ಪಾಲಿಕೆಯಿಂದ ಕೋರಲಾಗಿರುತ್ತದೆ. ಆದಾಗ್ಯೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಈವರೆವಿಗೂ ಯಾವುದೇ ಪತ್ರ ವ್ಯವಹಾರಗಳಾಗಲೀ ಅಥವಾ ಕೆರೆಗಳನ್ನು ಮೇಲೆ ಕೋರಿರುವ ವಿವರಗಳೊಂದಿಗೆ ಹಸ್ತಾಂತರಿಸುವ ಕ್ರಮ ಕೈಗೊಳ್ಳದ ಕಾರಣ ಸದರಿ ಕೆರೆಗಳನ್ನು ಅಧಿಕೃತವಾಗಿ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

ಮುಂದುವರೆದು, ದಿನಾಂಕ: 01/02/2019 ರ ಉಲ್ಲೇಖ (5) ರ ಸರ್ಕಾರಿ ಆದೇಶದಂತೆ ಮುಖ್ಯ ಮಂತ್ರಿಗಳ ನವ ಬೆಂಗಳೂರು ಯೋಜನೆಯ ಅನುಮೋದಿತ ಕ್ರಿಯಾಯೋಜನೆಯಲ್ಲಿ ಹುಳಿಮಾವು ಕೆರೆಯನ್ನು ಅಭಿವೃದ್ಧಿಪಡಿಸಲು ರೂ. 10.00 ಕೋಟಿಗಳ ಅನುದಾನವನ್ನು ಮಂಜೂರು ಮಾಡಿದ್ದ ಮೇರೆಗೆ, ಸದರಿ ಕೆರೆಯನ್ನು ಅಭಿವೃದ್ಧಿಪಡಿಸಲು ರೂ. 10.00 ಕೋಟಿಗಳಿಗೆ ಇ-ಅಂದಾಜುಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿ, ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಂಡು ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಈ ಮಧ್ಯೆ, ಉಲ್ಲೇಖ (6) ರಂತೆ

ದಿನಾಂಕ:20/09/2019 ರಂದು ಹೊರಡಿಸಲಾಗಿರುವ ಸರ್ಕಾರಿ ಆದೇಶದದಲ್ಲಿ, 2018-19 ನೇ ಸಾಲಿನ ಆಯವ್ಯಯದಲ್ಲಿ ಅನುಮೋದಿಸಿದ್ದ "ಮುಖ್ಯ ಮಂತ್ರಿಗಳ ನವ ಬೆಂಗಳೂರು" ಯೋಜನೆಯನ್ನು ರದ್ದುಪಡಿಸಿ ಪರ್ಯಾಯವಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಸದರಿ ಕ್ರಿಯಾ ಯೋಜನೆಯಲ್ಲಿ ಈ ಹಿಂದೆ ಹುಳಿಮಾವು ಕೆರೆಯಅಭಿವೃದ್ಧಿಗಾಗಿ ಮೀಸಲಿರಿಸಿದ್ದ ರೂ. 10.00 ಕೋಟಿಗಳ ಅನುದಾನವನ್ನು ಹಿಂಪಡೆದು, ಪ್ರಸ್ತುತ ಮಂಜೂರಾಗಿರುವ ಕ್ರಿಯಾಯೋಜನೆಯಲ್ಲಿ ಹುಳಿಮಾವು ಕೆರೆಯ ಅಭಿವೃದ್ಧಿಗೆ ರೂ. 2.00 ಕೋಟಿಗಳನ್ನು, ಹುಳಿಮಾವು ಕೆರೆಯ ನಡೆದಾರಿ ಮತ್ತು ತಂತಿ ಬೇಲಿ ಅಳವಡಿಸಲು ರೂ. 2.00 ಕೋಟಿಗಳನ್ನು ಮತ್ತು ಹುಳಿಮಾವು ಕೆರೆಯಲ್ಲಿ ವಿದ್ಯುದ್ಧೀಪಗಳನ್ನು ಅಳವಡಿಸಲು ರೂ. 2.00 ಕೋಟಿಗಳು, ಅಂದರೆ ಒಟ್ಟು 6 ಕೋಟಿಗಳ ಅನುದಾನಕ್ಕೆ ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ ಸದರಿ ಕೆಲಸಗಳಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ.

ದಿನಾಂಕ: 24.11.2019 ರಂದು ಮಧ್ಯಾಹ್ನ ಸುಮಾರು 1.00 ಗಂಟೆಯ ಸಮಯದಲ್ಲಿ ಹುಳಿಮಾವು ಕೆರೆಯ ಕೋಡಿಯ ಬಳಿ ಏರಿಯು ಒಡೆದು ಕೆರೆಯ ಮುಂಭಾಗದಲ್ಲಿರುವ ಲೇಔಟ್ ಹಾಗೂ ಮನೆಗಳು ಜಲಾವೃತಗೊಂಡಿರುವ ವಿಷಯ ತಿಳಿದು ನಾನು, ಪೂಜ್ಯ ಮಹಾಪೌರರು, ಉಪ ಮಹಾ ಪೌರರು, ಸ್ಥಳೀಯ ನಗರಪಾಲಿಕೆ ಸದಸ್ಯರು ಮತ್ತು ಸ್ಥಳೀಯ ಪೊಲೀಸ್ ಅಧಿಕಾರಿಗಳು, ಮುಖ್ಯ ಅಭಿಯಂತರರು ಕೆರೆಗಳು ಹಾಗೂ ಇತರೆ ಪಾಲಿಕೆ ಅಧಿಕಾರಿಗಳೊಡನೆ ಸ್ಥಳಕ್ಕೆ ಧಾವಿಸಿ ಪರಿಶೀಲಿಸಲಾಯಿತು. ಸದರಿ ಕೆರೆಯ ಏರಿಯು ಒಡೆದು, ಕೆರೆಯ ನೀರು ಒಡೆದಿದ್ದ ಏರಿಯ ಮೂಲಕ ಹೊರಗೆ ಹೋಗುತ್ತಿದ್ದು, ನೀರು ಹೆಚ್ಚು ರಭಸವಾಗಿ ಕೆರೆಯಿಂದ ಹೋಗುತ್ತಿದ್ದರಿಂದ ನೀರು ರಾಜಕಾಲುವೆ ತುಂಬಿ ಹೊರಗೆ ಹರಿದು ರಾಜಕಾಲುವೆ ಅಕ್ಕಪಕ್ಕದಲ್ಲಿನ ರಸ್ತೆಗಳಿಗೆ ಮತ್ತು ಮನೆಗಳಿಗೆ ನುಗ್ಗಿ ಭೂಮಿಯಿಂದ ಸುಮಾರು 3-4 ಅಡಿಗಳಷ್ಟು ಎತ್ತರದಲ್ಲಿ ಹರಿಯುತ್ತಿದ್ದುದು ಕಂಡುಬಂದಿರುತ್ತದೆ. ನೀರು ಹುಳಿಮಾವು ಗ್ರಾಮದ ಕೃಷ್ಣ ಲೇಔಟ್, ಬಿಟಿಎಂ ಲೇಔಟ್, ಆರ್.ಆರ್. ಲೇಔಟ್, ಸರಸ್ವತಿಪುರಂ, ವೈಶ್ಯಾ ಬ್ಯಾಂಕ್ ಕಾಲೋನಿಗಳಲ್ಲಿನ ಮನೆಗಳು/ವಸತಿಸಮುಚ್ಚಯಗಳಿಗೆ ಹರಿದು ಅಲ್ಲಿದ ವಾಹನಗಳಿಗೆ ನೀರು ತುಂಬಿಕೊಂಡು ಅಪಾರವಾದ ಆಸ್ತಿಪಾಸ್ತಿಗೆ ನಷ್ಟ ಉಂಟಾಗಿರುರುವುದನ್ನು ಅರಿತು ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಪಾಲಿಕೆಯು ತಕ್ಷಣವೇ ಯಂತ್ರೋಪಕರಣಗಳನ್ನು ಬಳಸಿ, ಒಡೆದಿದ್ದ ಕೆರೆಯ ಏರಿಗೆ ಮಣ್ಣನ್ನು ತುಂಬಿ ನೀರು ಕೆರೆಯಿಂದ ಹೊರಗೆ ಹೋಗದಂತೆ ತಡೆಯಲು ಕ್ರಮವಹಿಸಲಾಗಿರುತ್ತದೆ. ಹಾಗೂ ಎನ್.ಡಿ.ಆರ್.ಎಫ್. ಸಿಬ್ಬಂದಿ ವತಿಯಿಂದ ನೀರಿನಲ್ಲಿ ಸಿಲುಕಿದ್ದ ಸಾರ್ವಜನಿಕರನ್ನು ರಕ್ಷಣೆ ಮಾಡುವ ಕೆಲಸಗಳನ್ನು ಕೈಗೊಳ್ಳಲಾಗಿರುತ್ತದೆ. ಸಮಯೋಚಿತವಾಗಿ ರಕ್ಷಣಾ ಕೆಲಸಗಳನ್ನು ಕೈಗೊಂಡಿರುವ ಕಾರಣ, ಯಾವುದೇ ಸಾವುನೋವುಗಳು ಸಂಭವಿಸಿರುವುದಿಲ್ಲ. ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಪ್ರವಾಹ ಪೀಡಿತಕ್ಕೆ ಒಳಗಾದ ಸುಮಾರು 150 ಜನರನ್ನು ಸಾಯಿ ಬಾಬ ದೇವಸ್ಥಾನದ ಹತ್ತಿರವಿರುವ ಬ್ಯಾಟ್‌ಮಿಂಟನ್ ಕೋರ್ಟ್ ನಲ್ಲಿ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಪಾಲಿಕೆಯ ಕಂದಾಯ, ಘನತ್ಯಾಜ್ಯ ವಿಭಾಗ, ಆರೋಜ್ಯ, ತಾಂತ್ರಿಕ ವಿಭಾಗಗಳು ಜಂಟಿಯಾಗಿ ಮನೆಮನೆಗೂ ಭೇಟಿ ನೀಡಿ ಆಗಿರುವ ನಷ್ಟದ ಬಗ್ಗೆ ಅಂದಾಜಿಸುವ ಕ್ರಮ ಕೈಗೊಳ್ಳಲಾಗಿರುತ್ತದೆ.

ದಿನಾಂಕ: 26.11.2019 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ರವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ಥರಿಗೆ ಸಾಂತ್ವಾನ ಹೇಳಿದ್ದು, ಪಾಲಿಕೆಯ ಆರೋಗ್ಯ ವಿಭಾಗದಿಂದ ಪ್ರವಾಹ ಪೀಡಿತ ಪ್ರದೇಶಗಳನಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಕೆಲಸಗಳನ್ನು ಮತ್ತು ಘನತ್ಯಾಜ್ಯ ವಿಭಾಗದಿಂದ ತೀವ್ರ ಸ್ವಚ್ಚತಾ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಮುಂಜಾಗ್ರತಾ ಕ್ರಮವಾಗಿ ಯಾವುದೇ ಸಾಂಕ್ರಾಮಿಕ ರೋಗಗಳು ಹರಡದಂತೆ ಎಚ್ಚರಿಕೆ ವಹಿಸಲಾಗಿದ್ದು, ಆಂಬುಲೆನ್ಸ್ ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿರುತ್ತದೆ. ಪ್ರವಾಹ

ಪೀಡಿತದಿಂದ ಸುಮಾರು 319 ಮನೆಗಳು ಹಾನಿಯಾಗಿದ್ದು, ಇತ್ತೀಚಿನವರೆಗೂ ಅಂದಾಜಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಥಳದ ಮೇಲೆ ತೆಗೆದಿರುವ ಛಾಯಾಚಿತ್ರಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಈ ಬಗ್ಗೆ ಹೆಚ್ಚಿನ ವಿವರಣೆಯನ್ನು ವಲಯದ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ರವರಿಂದ ಪಡೆಯಬಹುದಾಗಿದೆ.

ದಿನಾಂಕ: 24.11.2019 ರಂದು ಉಲ್ಲೇಖ (7) ರಂತೆ ಪಾಲಿಕೆಯ ವತಿಯಿಂದ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ (First Information Report) ಸಂಖ್ಯೆ: 0246/2019, ಅನ್ನು ದಾಖಲು ಮಾಡಿ ಇದಕ್ಕೆ ಕಾರಣಕರ್ತರಾಗಿರುವವರನ್ನು ಪತ್ತೆ ಮಾಡಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿದ್ದು ವಿಚಾರಣೆಯ ಪ್ರಗತಿಯಲ್ಲಿರುವ ಬಗ್ಗೆ ತಿಳಿದು ಬಂದಿರುತ್ತದೆ.

ಪ್ರಸ್ತುತ ಹುಳಿಮಾವು ಕೆರೆ ಏರಿಯು ಒಡೆದಿರುವ ಭಾಗದಲ್ಲಿ ತಾತ್ಕಾಲಿಕ ಕಾಫರ್ ಡ್ಯಾಮ್ ನಿರ್ಮಿಸಿ ಕೆರೆಗೆ ಹರಿದುಬರುತ್ತಿರುವ ಕೊಳಚೆ ನೀರನ್ನು ಕೆರೆಯಿಂದ ಹೊರಹಾಕಲು 4 ಅಡಿ ವ್ಯಾಸದ ಸುಮಾರು 140 ಮೀಟರ್ ಉದ್ದ ಕೊಳವೆ ಮಾರ್ಗ ನಿರ್ಮಾಣ, ಕೆರೆ ಏರಿಯು ಒಡೆದಿರುವ ಭಾಗದಲ್ಲಿ ಆರ್.ಸಿ.ಸಿ ಗ್ರಾವಿಟಿ ವಾಲ್ ನಿರ್ಮಾಣ, ನೀರು ಸರಾಗವಾಗಿ ಹರಿಯುವ ಸಲುವಾಗಿ ಕೆರೆಯ ತಲಭಾಗದಿಂದ ಒಂದು ಮೀಟರ್ ಎತ್ತರಕ್ಕೆ ಟೋ-ವಾಲ್ ನಿರ್ಮಾಣ, ನೀರು ಹೊರಹರಿವು ಭಾಗದಲ್ಲಿ ಅಡ್ಡಲಾಗಿರುವ ರಸ್ತೆಯನ್ನು ತೆರವುಗೊಳಿಸುವ ಕೆಲಸ, ರಾಜಕಾಲುವೆಯ ತಳಭಾಗಕ್ಕೆ ಸಮಾನಾಂತರವಾಗಿ ಮನೆಗಳನ್ನು ನಿರ್ಮಿಸಿರುವ ಹಿನ್ನಲೆಯಲ್ಲಿ ಆ ಮನೆಗಳಿಗೆ ನೀರು ಹರಿಯದಂತೆ ಆರ್.ಸಿ.ಸಿ ತಡೆಗೋಡೆ ನಿರ್ಮಾಣ, ಕೆರೆ ಪ್ರದೇಶದಲ್ಲಿ ತ್ಯಾಜ್ಯ ವಸ್ತುಗಳನ್ನು ಸುರಿಯದಂತೆ ಗೇಟ್ ಅಳವಡಿಸುವ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಹುಳಿಮಾವು ಕೆರೆಯನ್ನು ಅಭಿವೃದ್ಧಿ ಪಡಿಸಲು ಸಮಗ್ರ ಯೋಜನಾ ವರದಿಯಂತೆ ಸುಮಾರು ರೂ. 17.40 ಕೋಟಿಗಳ ಅವಶ್ಯಕತೆ ಇದ್ದು, ಪಾಲಿಕೆಯ ಅನುದಾನದ ಕೊರತೆಯಿಂದಾಗಿ, ಈ ಹಿಂದೆ ನವ ಬೆಂಗಳೂರು ಯೋಜನೆಯಲ್ಲಿ ಮೀಸಲಿರಿಸಿದ್ದ ರೂ. 10.00 ಕೋಟಿಗಳನ್ನು ಹಿಂಪಡೆದ ಕಾರಣ ಮತ್ತು ಪ್ರಸ್ತುತ ಸರ್ಕಾರದಿಂದ ಮಂಜೂರಾಗಿರುವ ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿರುವ, ಹುಳಿಮಾವು ಕೆರೆಯ ಅಭಿವೃದ್ಧಿಗೆ ರೂ. 2.00 ಕೋಟಿ, ಹುಳಿಮಾವು ಕೆರೆಯ ನಡೆದಾರಿ ಮತ್ತು ತಂತಿ ಬೇಲಿ ಅಳವಡಿಸಲು ರೂ. 2.00 ಕೋಟಿ ಮತ್ತು ಹುಳಿಮಾವು ಕೆರೆಯಲ್ಲಿ ವಿದ್ಯುದ್ದೀಪಗಳನ್ನು ಅಳವಡಿಸಲು ರೂ. 2.00 ಕೋಟಿಗಳ ಅನುದಾನದಿಂದ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸಾಧ್ಯವಿರುವುದಿಲ್ಲ. ಪ್ರಸ್ತುತ ಆದ್ಯತೆ ಮೇರೆಗೆ ಕೈಗೊಳ್ಳಬೇಕಾಗಿರುವ ಕಾಮಗಾರಿಗಳಾದ ಕೆರೆಯ ಗಡಿಬಾಂದುಗಳಿಗೆ ತಂತಿ ಬೇಲಿ ಅಳವಡಿಸುವುದು, ಕೊಳಚೆ ನೀರು ತಿರುವುಗಾಲುವೆ ನಿರ್ಮಾಣ, ಹೂಳು ತೆಗೆದು ಹೊರಸಾಗಿಸುವುದು, ಮುಖ್ಯ ಏರಿಯನ್ನು ಬಲಪಡಿಸುವುದು, ರಿಂಗ್ ಬಂಡ್ ನಿರ್ಮಾಣ, ಒಳಹರಿವು ಕಾಲುವೆ ನಿರ್ಮಾಣ, ಕೋಡಿ ನಿರ್ಮಾಣ ಮುಂತಾದ ಅಗತ್ಯ ಕೆಲಸಗಳನ್ನು ಕೈಗೊಳ್ಳಲು ಸುಮಾರು ರೂ. 15.00 ಕೋಟಿಗಳ ಅವಶ್ಯಕತೆ ಇರುತ್ತದೆ. ಪಾಲಿಕೆಯಿಂದ ಕೋರಿರುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಂಪೂರ್ಣ ದಾಖಲೆ ಮತ್ತು ತಾಂತ್ರಿಕ ವಿವರಗಳೊಂದಿಗೆ ಕೆರೆಯನ್ನು ಹಸ್ತಾಂತರಿಸಿಲ್ಲವಾದ ಕಾರಣ ಮತ್ತು ಕೆರೆಯ ಅಭಿವೃದ್ಧಿಗೆ ಅಗತ್ಯವಿರುವ ಅನುದಾನ ಬಿಡುಗಡೆಯಾಗದ ಕಾರಣ ಕೆರೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಮುಂದುವರೆದು ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES) PIL ರ ಜೆ.ಪಿ ನಗರ 4ನೇ ಹಂತ ಡಾಲರ್ಸ್ ಲೇಔಟ್ ರೆಸಿಡೆಂಟ್ಸ್

ಅಸೋಸಿಯೇಷನ್ಸ್ ಮತ್ತು ಇತರರ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣಕ್ಕೆ ಸಂಬಂದಿಸಿದಂತೆ ದಿನಾಂಕ: 27-11-2019 ರಂದು ಉಚ್ಚ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಈ ಕೆಳಕಂಡಂತೆ ನ್ಯಾಯಾಲಯವು ನಿರ್ದೇಶಿಸಿರುತ್ತದೆ.

"Our attention is also invited to three recent incidents about the collapse of retention wall of the lakes which relate to evoking certain areas of the city. The 8th respondent appearing in person states that the work of rejuvenation may not have been done scientifically. There are disputes between the learned counsel appearing for the BBMP and learned counsel appearing for the BDA about the jurisdiction of the said properties over the 3 lakes. The collapse of retention of the wall of 3 lakes has resulted into serious consequences apart from causing enormous damages to the citizens and their properties, such collapse may lead to destruction of the lakes. We direct the state Government, BBMP and BDA to come out with immediate measure to ensure that such incidents will not repeat in respect of the other lakes. Moreover, the state must ensure that the proper enquiry must be held and report the causes for the said incidents and the enquiry report must be placed before the court.

ಸರ್ಕಾರಿ ಆದೇಶ ಸಂಖ್ಯೆ: ನಅಇ 250 ಎಂಎಸ್‌ವೈ 2018 (ಭಾಗ-1) ಬೆಂಗಳೂರು ದಿನಾಂಕ: 02-12-2019 ರಂದು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ದೊಡ್ಡಬಿದರಕಲ್ಲು, ಹೊಸಕೆರೆಹಳ್ಳಿ ಮತ್ತು ಹುಳಿಮಾವು ಕೆರೆಗಳ ಏರಿ ಒಡೆದ ಪ್ರಕರಣಗಳ ಕುರಿತು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಒಂದು ತಾಂತ್ರಿಕ ಸಮಿತಿಯನ್ನು ರಚಿಸಿದ್ದು ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಮೇಲಿನಂತೆ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಂಪೂರ್ಣ ದಾಖಲೆ ಮತ್ತು ತಾಂತ್ರಿಕ ವಿವರಗಳೊಂದಿಗೆ ಕೆರೆಯನ್ನು ಹಸ್ತಾಂತರಿಸಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕೆರೆಗೆ ಯಾವುದೇ ಕೊಳಚೆ ನೀರು ಸೇರದಂತೆ ಕ್ರಮ ವಹಿಸಿ ಕಂದಾಯ ಇಲಾಖೆಯಿಂದ ಕೆರೆಯ ಗಡಿಗಳನ್ನು ಗುರುತಿಸಿ ಅತಿಕ್ರಮಣಗಳೇನಾದರೂ ಇದ್ದಲ್ಲಿ ತೆರವುಗೊಳಿಸುವ ಕ್ರಮ ಕೈಗೊಂಡ ನಂತರ ಪಾಲಿಕೆಯಿಂದ ಕೆರೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬಹುದಾಗಿದೆ ಎಂಬ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಕೆರೆಗಳು, ಬಿಬಿಎಂಪಿ".

7. The report submitted sets out in detail the names of the persons who are affected on account of breach of lake

in question and the steps taken on behalf of BBMP to redress the grievance of the persons affected. It is pointed out that 374 families are affected and out of them 351 families have been paid compensation amount at the rate of Rs.50,000/- (Rupees fifty thousand only) per family, which has been credited to their bank accounts and in respect of the remaining 23 persons the amount will be credited to their account within two days from today. The said statement is placed on record. It is also pointed out in the course of proceedings by Sri. K.Siddegowda, Chief Engineer and Sri. M.Ramakrishna, Joint Commissioner, that after proper assessment of the loss sustained by several people, it was noticed that five buildings have been fully damaged which requires payment of compensation. It is pointed out that, the compensation would be paid as per the norms laid down in Disaster Management Guidelines of Government of India. Sri. K. Siddegowda pointed out that after assessing the actual loss sustained by them, the effective steps will be taken to credit the compensation payable to each one of them within two weeks from today.

It is needless to point out that the compensation to be paid must be just and fair, which should neither be less nor excessive. I am sure, the concerned authorities will take every care to see that fair and just compensation is paid to the victims. The report submitted also indicates that the people who are housed in the Rehabilitation Centre (ಗಂಜಿ ಕೇಂದ್ರ) were given Kits worth Rs.2,500/- to around 165 families. The Kit contains rice and other things. The report submitted indicates that the steps would be taken to provide books, cloths etc., required for 30 students, who are affected. It is needless to point out that effective steps are required to be taken to provide books and other facilities to the students without further delay and at any event not later than five days from today. The statement regarding the above should be filed within three weeks from today, **before the Deputy Registrar of Enquiries-3, Karnataka Lokayukta, Bengaluru.**

8. The report submitted indicates that many of the families have lost their Aadhar Card, Driving License,

Ration Card, etc. These documents are essentially required by the families. In this back ground, it is needless to point out that a joint meeting of concerned officials of concerned departments to be convened at the spot and arrangements may be made for issue of the essential cards like Aadhar Card, Driving License etc., such steps shall be taken and the necessary license and cards as indicated above should be provided on or before 31st December 2019.

9. It is needless to point out that a follow up action as indicated in the report submitted is required to be taken by the concerned officers of the BBMP keeping in mind the hardships faced by the persons who are affected on account of the flow of water from the lake. Since the lake was under the custody of the Bruhat Bengaluru Mahanagara Palike, it is needless to point out that it was the duty and responsibility of the BBMP to redress the grievance of the persons affected. The report submitted indicates that a Criminal Case has been registered in Cr.No. 0246/2019 of Hulimavu Police Station with respect

to the breach of lake in question and the investigation is under progress.

10. 21 petitions have been received by this office from the persons who are stated to have been affected on account of breach of lake. The names of the applicants/petitioners are set out in detail, as herein below:

| Sl.No. | Name Sri./Smt. | Date of application |
|---|---|---|
| 1) | K.Sudhakar Hegde, No.143/144, 2nd Cross, Royal Residency, BTM 4th Stage, Banneraghatta Road, Bengaluru -76. | 2-12-2019 |
| 2) | Sravanthi, 1st Cross, RR Layout, Near Saibaba Temple, Arekere, BTM 4th Stage, Bengaluru -76. | 3-12-2019 |
| 3) | Sheetal Domingo, No.116, GS Towers, RR Layout, Near Saibaba Temple, Arekere, BTM 4th Stage, Bengaluru -76. | 3-12-2019 |
| 4) | P.Vinay, No.137, 1st Main, 2nd Cross, Royal Residency, Arekere, Bengaluru -76. | 4-12-2019 |
| 5) | Ganapatsa Kalburgi, #146, 2nd Cross, RR Layout, Arekere, BG Road, Bengaluru -76. | 3-12-2019 |
| 6) | Runa Kali, #135, 2nd Cross, RR Layout, I.I.M. Post, Arekere, Bengaluru -76. | 4-12-2019 |
| 7) | A.Shekar, "Sankruthi", #200, 5th Cross, Royal Residency, BTM 4th Stage, 80 ft Road, Bengaluru -76. | 3-12-2019 |

| | | |
|---|---|---|
| 8) | Sarvamangala, #147, 2nd Cross, RR Layout, I.I.M. Post, Arekere, Bengaluru -76. | 4-12-2019 |
| 9) | Raveendran M./ Bindu B. #138 – Ground Floor, 2nd Cross, RR Layout, DLF Main Road, Hulimavu, Bengaluru -76. | 4-12-2019 |
| 10) | Subramanya Balige, #154, 2nd Cross, RR Layout, I.I.M. Post, Arekere, Bengaluru -76. | 3-12-2019 |
| 11) | Rajendra Menon & Prema Menon, #43, 4th Cross, RR Layout, Visweswariah Marg, Bengaluru -76. | 1-12-2019 |
| 12) | Mahesh Acharya, #142, 1st Main, 2nd Cross, BTM 4th Stage, Bengaluru -76. | 2-12-2019 |
| 13) | Nandini V.S. #195, 4th Cross, RR Layout, BTM 4th Stage, Bengaluru South, Bannerghatta Road, Bengaluru -76. | 3-12-2019 |
| 14) | Rashmi Gadhar Rachappa, #164, 3rd Cross, RR Layout, BTM 4th Stage, Bengaluru South, Bannerghatta Road, Bengaluru -76. | 3-12-2019 |
| 15) | Veena Venugopal, #186, 4th Cross, RR Layout, BTM 4th Stage, Hulimavu, Bengaluru -76. | 4-12-2019 |
| 16) | H.S.Madhura Babu, No.209, 5th Cross, RR Layout, IIMB Post, Bengaluru -76. | 5-12-2019 |
| 17) | S.L.Kumar, No.204, 5th Cross, RR Layout, IIMB Post, BTM 4th Stage, Bengaluru -76. | 5-12-2019 |

| | | |
|---|---|---|
| 18) | M.Tribuvan Naidu, #170, 3rd Cross, RR Layout, BTM 4th Stage, Bengaluru South, Bannerghatta Road, Bengaluru -76. | 3-12-2019 |
| 19) | Sheshagiri H.N., #169, 3rd Cross, RR Layout, BTM 4th Stage, Bengaluru South, Bannerghatta Road, Bengaluru -76. | 3-12-2019 |
| 20) | Prafull Manohar Laltare, No.91, 2nd Main, RR Layout, IIMB Post, BTM 4th Stage, Bengaluru -76. | 5-12-2019 |
| 21) | Welfare Association of Residents of Royal Residency, Registration No: BLU-S469-2006-2007, Royal Residency Library, IIMB Post, BTM 4th Stage, Bannerghatta Road, Bengaluru -76. | 6-12-2019 |

The copies of the said applications are handed over to Sri. K.Siddegowda, Chief Engineer. He is directed to examine the said applications on merits and dispose of the same in accordance with the guidelines of the BBMP laid down for payment of compensation, etc.

11. In the course of proceedings, on behalf of Complainant Sri. H.S.Doreswamy, a letter dated 10-12-2019 has been submitted by Sri. Harish Kumar M.P. The said letter indicates the steps that could be taken by BBMP to protect the lake. A copy of the said letter is made

available to Sri. K.Siddegowda, Chief Engineer, Bommanahalli Zone, BBMP and Sri. Linegowda, Assistant Executive Engineer (Lakes).

12. Smt. N.Asha Kumari, Assistant Director of Land Records, Bengaluru South Taluk, is present along with Sri. Girish, Surveyor. She has filed a Survey Sketch of the survey conducted in respect of Sy.No.42 of Hulimavu village, Begur Hobli. The said sketch indicates that the total extent of lake is 124 acres and 25 guntas. It was pointed out by Sri. H.S.Doreswamy that Hulimavu lake is located in two survey numbers i.e., Sy.No.42 of Hulimavu village and Sy.No.110 of Kammanahalli village. Sri.Lingegowda, Assistant Executive Engineer submits that the lake is located in two survey numbers i.e., Sy.No.42 and Sy.No.110 as pointed by Sri. H.S.Doreswamy. According to Sri. Lingegowda, the total extent of lake comprised in Sy.No.42 of Hulimavu village and Sy.No.110 of Kammanahalli village is 140 acres and 17 guntas. Since the survey of Sy.No.110 has not been carried out, the Assistant Director of Land Records, Bengaluru South

Taluk, who is present before me, is directed the get the lake portion in Sy.No.110 Of Kammanahalli village surveyed, by the next date of hearing. She is given two weeks time to get Sy.No.110 of Kammanahalli surveyed. She is also given two weeks time to file additional statement setting out in detail the encroachment portion both in Sy.No.42 of Hulimavu village and Sy.No.110 of Kammanahalli village with regard to the private encroachment and also the encroachment by Bengaluru Development Authority and other governmental authorities. **She is also directed to forward the copies of survey reports of both the survey numbers to the Tahsildar, Bengaluru South Taluk, within 20 days from today. On receipt of such report the Tahsildar, Bengaluru South is required to take steps to remove the encroachments within a period of eight weeks thereafter, in accordance with law.** The copy of the survey report may also be made available to the Complainant Sri. H.S.Doreswamy. It is desirable that the Surveyor issues notice to the Executive Engineer of BBMP

(Lakes) and also to the Complainant at the time of survey of the lake in question. The liberty is also reserved to the Complainant to give such representation to the BBMP and also to the Tahsildar and Surveyor. It is also needless to point out that the BBMP is required to fence the lake area to protect the lake and take effective steps to rejuvenate the lake.

13. Sri. Lingegowda, Assistant Executive Engineer submits that BBMP has employed people (Home Guards) with its watch and ward to protect the lake. He submitted that effective steps are being taken to prevent any effluent substance being thrown to the lake. Sri. Lingegowda, Assistant Executive Engineer is directed to file status report with regard to the steps taken by BBMP to rejuvenate the lake, by the next date of hearing.

14. The KSPCB is to inspect the pollution level of the water in the lake and submit the report, by the next date of hearing.

15. Sri. A. Rajashekar, Executive Engineer, BWSSB, has submitted that BWSSB has taken steps to install one STP of 10 mld., capacity and the installation of said STP will be completed within about three months from today. The said statement is placed on record. He is directed to file status report with regard to the steps taken, on the next date of hearing.

16. The matter regarding consideration of rejuvenation of lake is concerned, this case may be listed on 15-02-2020. However, so far as payment of compensation and other steps that are required to be taken, the case is to be listed on 10-01-2020.

17. Communicate this order to the parties.

List this case on **10-01-2020.**

**(Justice P. Vishwanatha Shetty),** 10/12/2019
Lokayukta,
Karnataka State.

**AS***